ಸಿದ್ಧತೆಗಳೂ ನಡೆಯುತ್ತಿದ್ದರೆ ನನಗೆ ಒಳಗಿಂದೊಳಗೇ ತಲ್ಲಣ, ತಳಮಳ. ಆಳುಮಗನ ಪ್ರೀತಿಯಿಂದ ವಂಚಿತಳಾಗಿಬಿಡುವ ಆತಂಕ. ಅವನಿಗೂ ನನ್ನನ್ನು ಬಿಟ್ಟಿರಲಾರದ ಚಡಪಡಿಕೆ ಅವನ ಕಣ್ಣುಗಳಲ್ಲಿ ಎದ್ದು ಕಾಣುತ್ತಿತ್ತು. ಕಣ್ಣುಕಣ್ಣುಗಳು ಮಾತಾಡಿಕೊಂಡವು.

ಸರಿರಾತ್ರಿ ಎಲ್ಲರೂ ಮಲಗಿದ್ದಾಗ, ಮದುವೆಗೆಂದು ನನಗೆ ಮಾಡಿಸಿದ್ದ ಆಭರಣಗಳನ್ನೂ, ಮತ್ತೊಂದಷ್ಟು ಪುಡಿಗಾಸನ್ನೂ ಬಿಂದಿಗೆಯೊಳಗೆ ಹಾಕಿಕೊಂಡು, ನೀರು ತರುವವಳಂತೆ ನಟಿಸುತ್ತಾ ಹೊರಬಂದೆ. ಬಂದವಳು ಆ ಧಾವಂತದಲ್ಲೇ ಅವನೊಡನೆ ಕತ್ತಲೆಯಲ್ಲಿ ಕರಗಿಹೋದೆ. ಅವನ ಮೈಯ ಬಿಸುಪು ರಾತ್ರಿಯ ಚಳಿಯಲ್ಲೂ ನನ್ನ ಮೈಯನ್ನು ಬೆಚ್ಚಗಿರಿಸುತ್ತಿತ್ತು. ದೂರ.. ದೂರ.. ದೂರ.. ಅಪಾರ ದೂರ ಸಾಗಿ ಬೆಳಕು ಹರಿಯುವುದರೊಳಗಾಗಿ ಸಿಕ್ಕ ಯಾವುದೋ ಊರಿನಲ್ಲಿ, ಸಿಕ್ಕ ಯಾರದೋ ಪುಟ್ಟ ಗುಡಿಸಲಿನಲ್ಲಿ ತಳವೂರಿದೆವು.

ಕೊಡಪಾನದಲ್ಲಿ ತಂದಿದ್ದ ದ್ರವ್ಯವನ್ನು ಸ್ವಲ್ಪಸ್ವಲ್ಪವೇ ಕರಗಿಸುತ್ತಾ ನಮ್ಮ ಹೊಟ್ಟೆ ಹೊರೆಯುತ್ತಿದ್ದೆವು. ಗಂಡನಾದವನಿಗೆ ಏನಾದರೂ ಕೆಲಸ ಮಾಡಿ ದುಡಿದು ತಾ ಎಂದರೆ, ಶ್ರಾವಸ್ತಿಯ ಯಾರಾದರೂ ಗುರುತುಹಿಡಿದುಬಿಟ್ಟರೆ ಎಂದು ಒಮ್ಮೆ, ನಿನ್ನನ್ನೂ ನಿನ್ನ ಆಭರಣಗಳನ್ನು ಬಿಟ್ಟು ಆಚೆ ಹೋದಾಗ ಯಾರಾದರೂ ಅಪಹರಿಸಿಬಿಟ್ಟರೆ ಎಂದು ಇನ್ನೊಮ್ಮೆ ಸಬೂಬು ಹೇಳುತ್ತಿದ್ದ. ಏನೂ ಕೆಲಸ ಮಾಡದೇ ಇದ್ದರೆ ಸಂಸಾರ ನಡೆಯುವುದಾದರೂ ಹೇಗೆ ಎಂದು ನಾವು ಜಗಳವಾಡುತ್ತಿದ್ದರೆ, ಏನೂ ಕೆಲಸ ಮಾಡದೆಯೂ ನಮ್ಮ ಸಂಸಾರ ಈವರೆಗೂ ಹೇಗೆ ನಡೆಯುತ್ತಿದೆ ಎಂಬ ಬಗ್ಗೆ ಅಕ್ಕಪಕ್ಕದವರಿಗೆ ಸಂಶಯ ಬಾರದಿರಲಿಲ್ಲ. ನಾನು ಎಷ್ಟೇ ಕೈ ಹಿಡಿತ ಮಾಡಿದರೂ ಎರಡು ವರ್ಷದೊಳಗಾಗಿ ತಂದಿದ್ದ ದ್ರವ್ಯವೆಲ್ಲಾ ಕರಗಿಹೋಯಿತು. ಈ ಮಧ್ಯೆ ನಾನು ಗರ್ಭಿಣಿ ಬೇರೆ ಆಗಿಹೋದೆ.

ಗಂಡ ದುಡಿಯುತ್ತಿಲ್ಲವೆಂದು ಮನೆಯಲ್ಲಿ ದಿನವೂ ಗಲಾಟೆ. ಈಗ ಹೆಂಡತಿಯೊಬ್ಬಳನ್ನೇ ದುಡಿದು ಸಾಕದ ನೀನು, ನಾಳೆ ನನ್ನನ್ನೂ ನನ್ನ ಮಕ್ಕಳನ್ನೂ ಹೇಗೆ ಸಾಕುತ್ತೀಯ ಎಂಬುದೇ ನಮ್ಮ ಜಗಳದ ಮೂಲಕೇಂದ್ರವಾಗಿತ್ತು. ಇನ್ನು ನಿನ್ನಿಂದ ನನ್ನನ್ನು ಸಾಕಲು ಸಾಧ್ಯವಿಲ್ಲ, ನಾನು ತಿರುಗಿ ತವರು ಮನೆಗೆ ಹೊರಟುಹೋಗುತ್ತೇನೆ ಎಂದು ಹಠ ಹಿಡಿದೆ. ಈಗಾಗಲೇ ಮನೆ ತೊರೆದು ಎರಡು ವರ್ಷಗಳಾಗಿವೆ, ಈಗ ಹೋದರೆ ಯಾರು ನಿನ್ನನ್ನು ಮನೆಗೆ ಸೇರಿಸುತ್ತಾರೆ ಎಂದು ಅವನೂ ವಾದಿಸಿದ. ನಿನ್ನೊಡನೆ ಉಪವಾಸ ಸಾಯುವುದಕ್ಕಿಂತ ಅವರು ಹಾಕುವ ತಂಗಳು ತಿನ್ನುವುದೇ ಲೇಸು ಎಂದು ನಾನೂ ಪ್ರತಿವಾದಿಸಿದೆ. ತನಗಂತೂ ಅವರ ಮನೆಗೆ ಬಂದು ಮುಖ ತೋರಿಸಲು ಸಾಧ್ಯವಿಲ್ಲ, ನೀನು ಬೇಕಾದರೆ ಹೋಗು ಎಂದ. ಮಗುವೊಂದನ್ನು ಒಡಲಲ್ಲಿಟ್ಟುಕೊಂಡು ಹೋದರೆ ನನ್ನನ್ನೇನೂ ಹೊರಹಾಕುವುದಿಲ್ಲ ಎಂದು ನಾನೂ ಸಮರ್ಥಿಸಿಕೊಂಡು ಗಂಟು ಮೂಟೆ ಕಟ್ಟಿಕೊಂಡು ಮನೆಬಿಟ್ಟು ಹೊರಟೇಬಿಟ್ಟೆ.

ತಾನು ಅಲ್ಲಿಗೆ ಮರಳುವುದಿಲ್ಲವೆಂದವನು, ಅಲ್ಲಿಯವರೆಗೆ ಬಿಟ್ಟು ಬರುತ್ತೇನೆ ಎಂದು ಸಂರಕ್ಷಣೆಯ ನೆಪ ಹೂಡಿಕೊಂಡು ಹಿಂದೆ ಹಿಂದೆಯೇ ಬಂದ. ದಾರಿಯುದ್ದಕ್ಕೂ ಮಾತಾಡುತ್ತಾ, ಇಷ್ಟುಹೊತ್ತಿಗೆ ನಮ್ಮ ಮೇಲಿನ ಸಿಟ್ಟನ್ನೆಲ್ಲಾ ಮರೆತಿರುತ್ತಾರೆ, ಜೊತೆಗೆ ನೀನು ಬಂದರೂ ಏನೂ ಅನ್ನಲಾರರು, ಈಗ ಮಗು ಬೇರೆ ಆಗುತ್ತಿರುವುದರಿಂದ ಎಲ್ಲವನ್ನೂ ಮನ್ನಿಸುತ್ತಾರೆ ಎಂದು ಹೇಳುತ್ತಿದ್ದರೂ ಅವನೇನೂ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ನನಗೆ ಮಾತ್ರ ತವರಿನ ಸೆಳೆತ ತೀವ್ರವಾಗಿತ್ತು. ಅಲ್ಲಿಯೇ, ಅಮ್ಮನ ಕೈಯ್ಯಲ್ಲೇ ಹೆರಿಗೆ ಮಾಡಿಸಿಕೊಳ್ಳಬೇಕೆಂಬ ಬಯಕೆ ಅತೀವವಾಗುತ್ತಿತ್ತು.

ನಡೆಯುತ್ತಾ, ನಡೆಯುತ್ತಾ ದಾರಿಯಲ್ಲಿ ಸಿಕ್ಕವರನ್ನೆಲ್ಲಾ ಶ್ರಾವಸ್ತಿಯ ದಾರಿ ಎತ್ತ ಎಂದು ಕೇಳುತ್ತಾ ಇರಬೇಕಾದರೆ ಸಂಜೆಯು ಸಮೀಪಿಸಲಾರಂಭಿಸಿತ್ತು. ಆದರೆ ಮಾರ್ಗ ಮಧ್ಯೆಯೇ ನನಗೆ ಹೆರಿಗೆಯ ನೋವು ಕಾಣಿಸಲಾರಂಭಿಸಿತು. ಇನ್ನೂ ಎಷ್ಟೋ ಹರದಾರಿ ದೂರ ಇರುವ ಶ್ರಾವಸ್ತಿಯನ್ನು ಸೇರುವುದಾದರೂ ಹೇಗೆ ಎಂಬ ಆತಂಕ ಎದುರಾಯಿತು. ತವರು ಮನೆಯಲ್ಲೇ ಹೆರಿಗೆ ಆಗಬೇಕೆಂಬ ಹೆಣ್ಣಿನ ಸಣ್ಣ ಆಸೆಯನ್ನೂ ಈಡೇರಿಸಿಕೊಳ್ಳಲಾರದ ನತದೃಷ್ಟೆಯಾದ ನನ್ನ ಹೆರಿಗೆಯು ದಾರಿಯಲ್ಲಿನ ಯಾವುದೋ ಪೊದೆಯಲ್ಲಿ ನಡೆದುಹೋಯಿತು- ದಾರಿಹೋಕರ ಕಣ್ಣಿಗೆ ಬೀಳದಂತೆ.

ತೀವ್ರ ಹೆರಿಗೆಯ ನೋವು ಹಾಗೂ